ಪ್ರಧಾನ ಜಿಲ್ಲಾ ಮತ್ತು ಸೆಷನ್ಸ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ

Spl.NDPS 9/2022

| | | | | |
|---|---|---|---|---|
| ಸಾಕ್ಷಿದಾರರ ಹೆಸರು | ಃ | ಕೆ.ಬಿ ರಾಮಚಂದ್ರಪ್ಪ | ಪಿ.ಡಬ್ಲ್ಯೂ. | 5 |
| ತಂದೆಯ ಹೆಸರು | ಃ | ಬಸಪ್ಪ | ಸಿ.ಡಬ್ಲ್ಯೂ. | 4 |
| ವಯಸ್ಸು | ಃ | 46 ವರ್ಷ | | |
| ಉದ್ಯೋಗ | ಃ | ಜಿಲ್ಲಾ ಅಧಿಕಾರಿಗಳು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಹೊಸಪೇಟೆ. | | |
| ವಾಸ ಸ್ಥಳ | ಃ | ಹೊಸಪೇಟೆ. | | |

ದಿ.27.03.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಕಲಂ 299 ಸಿ.ಆರ್.ಪಿ.ಸಿ. ಅಡಿಯಲ್ಲಿ ಸಾಕ್ಷ್ಯವನ್ನು ದಾಖಲಾಯಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ (ಮಂಜುನಾಥ ಬಿ.) ಃ**

1. ದಿ.11.10.2019 ರಿಂದ ದಿ.10.05.2022 ರ ವರೆಗೆ ನಾನು ಹರಿಹರ ತಾಲ್ಲೂಕಿನಲ್ಲಿ ತಹಶೀಲ್ದಾರರಾಗಿ ಕರ್ತವ್ಯ ನಿರ್ವಹಿಸಿದ್ದೇನೆ. ಆ ಸಮಯದಲ್ಲಿ ಚಾಸಾ-1 ರವರು ದಿ.12.09.2020 ರಂದು ಪೋಲೀಸ್ ಠಾಣೆಗೆ ನನ್ನನ್ನು ಕರೆಸಿಕೊಂಡು, ಹರಿಹರ ಶಿವಮೊಗ್ಗ ರಸ್ತೆಯ ಹನಗವಾಡಿ ವ್ಯಾಪ್ತಿಯಲ್ಲಿ ಗಾಂಜಾ ಮಾರಾಟ ಮಾಡುತ್ತಿರುವ ಬಗ್ಗೆ ಮಾಹಿತಿ ಬಂದಿದ್ದು, ದಾಳಿ ಮಾಡಬೇಕಾಗಿದೆ ಎಂದು ಪತ್ರಾಂಕಿತ ಅಧಿಕಾರಿ ಬರಬೇಕೆಂದು ನನ್ನನ್ನು ಕೋರಿದ್ದರು.

2. ಅವರ ಕೋರಿಕೆಯ ಮೇರೆಗೆ ಅದೇ ದಿನ ಮಧ್ಯಾಹ್ನ 12.30 ಗಂಟೆಗೆ ನಾನು ಹರಿಹರ ಗ್ರಾಮಾಂತರ ಪೋಲೀಸ್ ಠಾಣೆಗೆ ಭೇಟಿ ನೀಡಿದ್ದೆನು. ಈ ಪ್ರಕರಣದ ಚಾಸಾ-2 ಮತ್ತು 3 ರವರು ಸಹ ನನ್ನೊಂದಿಗೆ ಪಂಚರನ್ನಾಗಿ ಕರೆಸಿ, ಅವರಿಗೆ ಮಾಹಿತಿಯನ್ನು ತಿಳಿಸಿದ್ದರು. ನಂತರ ನಾವುಗಳು, ಪೋಲೀಸ್ ಸಿಬ್ಬಂದಿಗಳು, ಹರಿಹರ – ಶಿವಮೊಗ್ಗ ರಸ್ತೆಯ ಹನಗವಾಡಿಯ ಬಳಿ ಇಂಡಿಯನ್ ಡಾಬಾ ಬಳಿ ನಿಂತುಕೊಂಡೆವು. ಮರೆಯಲ್ಲಿ ನಾವು ನಿಂತುಕೊಂಡು ನೋಡುತ್ತಿದ್ದೆವು.

3. ಆ ಸಮಯದಲ್ಲಿ ಚಾಸಾ-1 ಮತ್ತು ಪೋಲೀಸ್ ಸಿಬ್ಬಂದಿಗಳು ಭರಣಿ ಹೋಟಲ್ ಮುಂಭಾಗದಲ್ಲಿ ಇದ್ದಂತಹ ಮೂರು ಜನರನ್ನು ಹಿಡಿದುಕೊಂಡರು. ಆ ಮೂವರ ಜೊತೆ ಒಂದು ಆಟೋ ಸಹ ಇತ್ತು, ಅದನ್ನು ವಶಕ್ಕೆ ಪಡೆದುಕೊಂಡರು. ಆ ಸಂದರ್ಭದಲ್ಲಿ ನಾನು ಕೂಡ ಸ್ಥಳಕ್ಕೆ ಭೇಟಿ ಕೊಟ್ಟೆನು. ನಾನು, ಪಂಚರು ಮತ್ತು ಚಾಸಾ-1 ರವರು ಆ ಮೂವರನ್ನು ವಿಚಾರಣೆ ಮಾಡಿದೆವು. ಅವರುಗಳು ತಮ್ಮ ಹೆಸರು ಕ್ರಮವಾಗಿ ರಾಹುಲ್, ಮಲ್ಲಿಕಾರ್ಜುನ ಮತ್ತು ಪ್ರಮೋದ್ ಎಂದು ಹಾಗೂ ತಾವು ಶಿವಮೊಗ್ಗದವರು ಎಂದು ತಿಳಿಸಿದರು.

4. ಅವರನ್ನು ಪರಿಶೀಲಿಸಿದಾಗ, ರಾಹುಲ್ ಮತ್ತು ಮಲ್ಲಿಕಾರ್ಜುನ ಬಳಿ ಎರಡು ಬ್ಯಾಗುಗಳು ಕಂಡು ಬಂದವು. ಬ್ಯಾಗುಗಳನ್ನು ಪರಿಶೀಲನೆ ಮಾಡಿದೆವು. ಆ ಮೂವರಿಗೂ ನೋಟಿಸು ಕೊಟ್ಟೆವು. ನಂತರ ರಾಹುಲ್ ನ ಬ್ಯಾಗನ್ನು ಪರಿಶೀಲನೆ ಮಾಡಿದಾಗ, ಸದರಿ ಬ್ಯಾಗು FASTTRACK ಎಂಬ ಹೆಸರಿನ ಕೆಂಪು ಬಣ್ಣದ್ದಾಗಿತ್ತು. ಸದರಿ ಬ್ಯಾಗುನ್ನು ಪರಿಶೀಲನೆ ಮಾಡಲಾಗಿ, ಒಂದು ಪ್ಲಾಸ್ಟಿಕ್ ಪಾರದರ್ಶಕ ಕವರಿನಲ್ಲಿ ಒಣಗಿದ ಸೊಪ್ಪು, ಬೀಜಗಳು, ಹೂವಿನ ಮೊಗ್ಗುಗಳು ಘಾಟು ವಾಸನೆಯಿಂದ ಕೂಡಿತ್ತು. ಅದು ಗಾಂಜಾ ಎಂದು ಗೊತ್ತಾಯಿತು. ಅವುಗಳನ್ನು ತೂಕ ಮಾಡಲಾಗಿ, ಅದು 2 ಕೆ.ಜಿ. 45 ಗ್ರಾಮ್ ಇತ್ತು. ನಂತರ ಪ್ರತ್ಯೇಕವಾಗಿ ಪ್ಯಾಕ್ ಮಾಡಿ, ಸೀಲ್ ಮಾಡಲಾಯಿತು.

5. ಅದೇ ರೀತಿ ಮಲ್ಲಿಕಾರ್ಜುನ ಎಂಬವನ ಬಳಿ ಇದ್ದ ಬ್ಯಾಗಳನ್ನು ಪರಿಶೀಲಿಸಲಾಗಿ, ಅದು ನೀಲಿ ಬಣ್ಣದ ENO ಬ್ಯಾಗ ಆಗಿತ್ತು. ಸದರಿ ಬ್ಯಾಗಿನಲ್ಲಿ ಪ್ಲಾಸ್ಟಿಕ್ ಕವರಿನಲ್ಲಿ ಗಾಂಜಾ ಇರುವುದು ಕಂಡು ಬಂತು. ಅದನ್ನು ತೂಕ ಮಾಡಲಾಗಿ, ಅದು 2 ಕೆ.ಜಿ. 45 ಗ್ರಾಂ ಇತ್ತು . ಅದನ್ನು ಸಹ ಪ್ರತ್ಯೇಕವಾಗಿ ಪ್ಯಾಕ್ ಮಾಡಿ ಸೀಲ್ ಮಾಡಲಾಯಿತು.

6. ಅದೇ ರೀತಿ ಪ್ರಮೋದ್ ನ ಅಂಗಶೋಧನೆ ಮಾಡಲಾಗಿ, ಆತನ ಪ್ಯಾಂಟಿನ ಬಲ ಒಳ ಜೇಬಿನಲ್ಲಿ 11 ಪ್ಲಾಸ್ಟಿಕ್ ಕವರುಗಳು ಇದ್ದು, ಅವುಗಳಲ್ಲಿಯೂ ಕೂಡ ಗಾಂಜಾ ಕಂಡು ಬಂದಿತು. ಅವುಗಳನ್ನು ಒಟ್ಟು ತೂಕ ಮಾಡಲಾಗಿ ಒಟ್ಟು 80 ಗ್ರಾಂ ಇತ್ತು. ಮತ್ತು ಆತನ ಪ್ಯಾಂಟಿನ ಎಡ ಒಳ ಜೇಬಿನಲ್ಲಿ 23 ಸಣ್ಣ ಪ್ಲಾಸ್ಟಿಕ್ ಕವರುಗಳು ಕಂಡು ಬಂದವು. ಅವುಗಳನ್ನು ಸಹ ಪ್ರತ್ಯೇಕವಾಗಿ ಪ್ಯಾಕ್ ಮಾಡಿ, ಸೀಲ್

ಮಾಡಲಾಯಿತು. ಸದರಿ ಸಣ್ಣ ಪ್ಲಾಸ್ಟಿಕ್ ಕವರುಗಳನ್ನು ಅವುಗಳಲ್ಲಿ ಗಾಂಜಾ ಹಾಕಿ ಮಾರಾಟ ಮಾಡಲು ಉಪಯೋಗಿಸುವುದಾಗಿ ತಿಳಿಸಿದರು.

7. ವಶಕ್ಕೆ ಪಡೆದ ಆಟೋ ಕಪ್ಪು ಬಣ್ಣದ್ದಾಗಿದೆ. ಅದರ ನಂ.ಕೆಎ-14 ಬಿ-8176 ಆಗಿದೆ. ಇವೆಲ್ಲವುಗಳನ್ನೂ ಮಧ್ಯಾಹ್ನ 1.30 ರಿಂದ 3.15 ರ ವರೆಗೆ ನಿಪಿ-8 ರಂತೆ ಪಂಚನಾಮೆ ಬರೆದು ವಶಕ್ಕೆ ಪಡೆದುಕೊಳ್ಳಲಾಯಿತು. ನಿಪಿ-8 ರಲ್ಲಿ ಸಾಕ್ಷಿಯು ತನ್ನ ಸಹಿಯನ್ನು ನೋಡಿ, ಗುರುತಿಸಿದ್ದರಿಂದ, ಈ ಸಾಕ್ಷಿಯ ಸಹಿಯನ್ನು **ನಿಪಿ-8(ಡಿ)** ಎಂದು ಗುರುತಿಸಲಾಯಿತು. ನಿಪಿ-8 ರ ಪಂಚನಾಮೆ ಬರೆಯುವಾಗ ನಿಪಿ-9 ರಿಂದ ನಿಪಿ-18 ರಂತೆ ಪೋಟೋಗಳನ್ನು ತೆಗೆಯಲಾಯಿತು. ನಿಪಿ-11 ರ ಪೋಟೋದಲ್ಲಿ ಸಾಕ್ಷಿಯು ಮೂವರು ಆರೋಪಿತರು ಕುಳಿತಿದ್ದಾರೆಂದು ಸಾಕ್ಷಿಯು ನೋಡಿ, ಗುರುತಿಸಿರುತ್ತಾರೆ. ನಿಪಿ-9 ರಲ್ಲಿ ಆಟೋ ಇರುವುದು ಕಂಡು ಬರುತ್ತದೆ.

8. ನ್ಯಾಯಾಲಯದಲ್ಲಿ ಹಾಜರುಪಡಿಸಿದ ಈಗಾಗಲೇ ಎಂ.ಓ.1 ರಿಂದ ಎಂ.ಓ.4 ಎಂದು ಗುರುತಿಸಲಾದ ಮುದ್ದೆಮಾಲುಗಳನ್ನು ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ. ಆರೋಪಿ 1 ರಿಂದ 3 ರವರೆಗೆ ಅಂಗಶೋಧನೆ ಮಾಡುವ ಬಗ್ಗೆ ಜಾರಿ ಮಾಡಲಾದ ನೊಟೀಸುಗಳ ಟ್ರೂ ಕಾಪಿಯನ್ನು ಕ್ರಮವಾಗಿ **ನಿಪಿ-19** ರಿಂದ **ನಿಪಿ-21** ಎಂದು ಗುರುತಿಸಲಾಯಿತು. ಮೂವರು ಆರೋಪಿತರನ್ನು ಪುನಃ ನೋಡಿದಲ್ಲಿ ಗುರುತಿಸುತ್ತೇನೆ.

**ಪಾಟೀ ಸವಾಲು :** ಪ್ರಸ್ತುತ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ .

ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು,
ದಾವಣಗೆರೆ.